# ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ : 2019-20ನೇ ಸಾಲಿನಲ್ಲಿ 2018-19ನೇ ಸಾಲಿಗೆ ಸಂಬಂಧಿಸಿದಂತೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮದಡಿ (NNBOMP) ನಿರ್ಮಿಸಲಾದ ಸ್ಥಾವರಗಳ ಬಾಕಿ ಪಾವತಿಗಾಗಿ ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನು ವರ್ಗಾಯಿಸುವ ಕುರಿತು.

ಓದಲಾಗಿದೆ :

1. CEO, ZP, ದಕ್ಷಿಣ ಕನ್ನಡ ರವರ ಪತ್ರ ಸಂಖ್ಯೆ ದಕಜಪ/ ಅಭಿವೃದ್ಧಿ/ ಜೈಅಯೋ/ಸಿಆರ್/01/2018-19(ಡಿ4) ದಿನಾಂಕ 31.07.2019.
2. CEO, ZP, ಕೋಲಾರ ರವರ ಪತ್ರ ಸಂಖ್ಯೆ ಜಿಪಂಕೋ/ಜೈಅಯೋ /ಸಿಆರ್/03/2018-19, ದಿನಾಂಕ 05.07.2019.
3. CEO, ZP, ಬೆಳಗಾವಿ ರವರ ಪತ್ರ ಸಂಖ್ಯೆ ಜಿಪಂಅವಿ/ರಾಜೈಅಯೋ/ ವಿವ/02/2019-20, ದಿನಾಂಕ 21.06.2019.

**ಪ್ರಸ್ತಾವನೆ :**

ಮೇಲೆ ಓದಲಾದ (1) ರಿಂದ (3)ರ ಪತ್ರಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಕೋಲಾರ ಮತ್ತು ದಕ್ಷಿಣ ಕನ್ನಡ ರವರುಗಳು 2018-19ನೇ ಸಾಲಿಗೆ ಸಂಬಂಧಿಸಿದಂತೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮದಡಿ(NNBOMP) ನಿಗದಿಪಡಿಸಿದ ಭೌತಿಕ ಗುರಿ ಮತ್ತು ಸಾಧಿಸಿದ ಪ್ರಗತಿಗನುಗುಣವಾಗಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮದ (NNBOMP) ದಾವಣಗೆರೆ, ಕೊಪ್ಪಳ ಮತ್ತು ರಾಯಚೂರು ಜಿಲ್ಲಾ ಪಂಚಾಯತ್‌ಗಳ 2017-18ನೇ ಸಾಲಿನ ಸಿಏ ಆಡಿಟ್ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರದನ್ವಯ 2018-19 ಹಾಗೂ ಹಿಂದಿನ ಸಾಲುಗಳಲ್ಲಿ ನಿಗದಿಪಡಿಸಿದ ಭೌತಿಕ ಗುರಿಯನ್ನು ಪೂರ್ಣಗೊಳಿಸದೇ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸಿದೇ ಬ್ಯಾಂಕ್ ಖಾತೆಯಲ್ಲಿ ಉಳಿಕೆ ಇರಿಸಿಕೊಂಡಿರುವ ಅನುದಾನವನ್ನು 2018-19ನೇ ಸಾಲಿನಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿ ಅನುದಾನದ ಕೊರತೆ ಹೊಂದಿರುವ ಬೆಳಗಾವಿ, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ಗಳಿಗೆ ಕಾರ್ಯಕ್ರಮದ ಹಿತದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸಹಾಯಧನ ಸೇರಿದಂತೆ ಒಟ್ಟಾರೆ **ರೂ.179.73ಲಕ್ಷ**ಗಳನ್ನು PFMS ಮತ್ತು RTGS ಮೂಲಕ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/22/ಆರ್‌ಇಪಿ/2019, ಬೆಂಗಳೂರು, ದಿನಾಂಕ 28.08.2019.

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ, ಕೊಪ್ಪಳ ಮತ್ತು ರಾಯಚೂರು ರವರು ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ(NNBOMP)ದಡಿ ಸಲ್ಲಿಸಿದ 2017-18ನೇ ಸಾಲಿನ ಕಾರ್ಯಕ್ರಮದ ಸಿಏ ಆಡಿಟ್ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರದನ್ವಯ ಕಾರ್ಯಕ್ರಮದ ಖಾತೆಯಲ್ಲಿ ವಿನಿಯೋಗಿಸದೇ ಲಭ್ಯವಿರುವ ಕೇಂದ್ರ ಹಾಗೂ ರಾಜ್ಯ ಸಹಾಯಧನ **ರೂ.179.73ಲಕ್ಷ**(ಒಂದು ನೂರ ಎಪ್ಪತ್ತೊಂಬತ್ತು ಲಕ್ಷದ ಎಪ್ಪತ್ಮೂರು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ಕೋಲಾರ ಮತ್ತು ದಕ್ಷಿಣ ಕನ್ನಡ ಇವರುಗಳಿಗೆ ಕೆಳಕಂಡಂತೆ ಹಂಚಿಕೆ ಮಾಡಿರುವಂತೆ ಕೇಂದ್ರ ಸಹಾಯಧನವನ್ನು PFMS ಮೂಲಕ & ರಾಜ್ಯ ಸಹಾಯಧನವನ್ನು RTGS ಮುಖೇನ ವರ್ಗಾಯಿಸುವಂತೆ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ವರ್ಗಾವಣೆಗೆ ಲಭ್ಯವಿರುವ ಅನುದಾನ | | ಜಿಲ್ಲೆ | ವರ್ಗಾಯಿಸುವ ಅನುದಾನ | |
|---|---|---|---|---|---|---|
| | | ಕೇಂದ್ರ | ರಾಜ್ಯ | | ಕೇಂದ್ರ | ರಾಜ್ಯ |
| 1 | ರಾಯಚೂರು | 65.21 | 0.53 | ದಕ್ಷಿಣ ಕನ್ನಡ | 62.74 | |
| | | | | ಕೋಲಾರ | 2.47 | |
| 2 | ಕೊಪ್ಪಳ | 22.64 | 25.79 | ಕೋಲಾರ | 2.52 | 6.42 |
| | | | | ಬೆಳಗಾವಿ | 20.00 | 18.58 |
| 3 | ದಾವಣಗೆರೆ | 67.11 | 0.00 | ಬೆಳಗಾವಿ | 67.00 | |
| ಒಟ್ಟು ಮೊತ್ತ | | 154.96 | 26.32 | | 154.73 | 25.00 |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ, ರಾಯಚೂರು ಮತ್ತು ಕೊಪ್ಪಳ ರವರು ರೂ.179.73ಲಕ್ಷಗಳ ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಕೋಲಾರ ರವರಿಗೆ PFMS ಮತ್ತು RTGS ಮೂಲಕ ವರ್ಗಾಯಿಸಲು ಆದೇಶಿಸಿದೆ. ಅದರಂತೆ ಬ್ಯಾಂಕ್ ವಿವರಗಳನ್ನು ಕೆಳಕಂಡಂತೆ ನೀಡಿದೆ.

| Sl.No. | District | Name of the A/c holder | Name of the Bank | IFSC Code | Account No. |
|---|---|---|---|---|---|
| 1 | Belgaum | Chief Executive Officer & Chief Account Officer. | Bank of Maharastra | MAHB0000944 | 20148221092 |
| 2 | D.Kannada | Thc National Bio Gas Scheme | Corporation Bank | CORP0000180 | 520101235473452 |
| 3 | Kolar | Chief Executive Officer & Chief Account Officer | Canara Bank | CNRB0000539 | 0539101040546 |

ಕಾರ್ಯಕ್ರಮದ ಪ್ರಗತಿಯ ಹಿತದೃಷ್ಟಿಯಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ, ಕೊಪ್ಪಳ ಮತ್ತು ರಾಯಚೂರು ರವರುಗಳು ಕೂಡಲೇ ರೂ.179.73ಲಕ್ಷಗಳನ್ನು PFMS & RTGS ಮೂಲಕ ವರ್ಗಾಯಿಸಲು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಕೋಲಾರ ರವರು ಮೇಲಿನಂತೆ ವರ್ಗಾಯಿತ ಅನುದಾನ ಪಡೆಯಲು ಸೂಕ್ತ ಕ್ರಮವಹಿಸತಕ್ಕದ್ದು ಹಾಗೂ ಅನುದಾನ ವರ್ಗಾಯಿಸಿದ ಹಾಗೂ ಸ್ವೀಕೃತಗೊಂಡ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ವರ್ಗಾಯಿಸಿದ ಅನುದಾನವನ್ನು ಮಾರ್ಗಸೂಚಿಯನ್ವಯ ಉದ್ದೇಶಿತ ಯೋಜನೆಗೆ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡತಕ್ಕದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ರೇವಣಪ್ಪ)
ನಿರ್ದೇಶಕರು (ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ್, ದಾವಣಗೆರೆ, ಕೊಪ್ಪಳ, ರಾಯಚೂರು, ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಕೋಲಾರ
3. ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
4. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ, ಇಲಾಖೆ.